# ವಾರ್ತಾ ವಿಶ್ಲೇಷಣೆ

## ಶ್ವಾನ ವೈದ್ಯ

ನಮ್ಮ ನಿಜವಾದ ವೈದ್ಯರು ಯಾರು? ನಮ್ಮ ಖಾಯಿಲೆಗೆ ಔಷಧಿ ಕೊಡುವವರೆ? ಮಾನಸಿಕ ರೋಗಗಳನ್ನು ಗುಣಪಡಿಸುವ ಮನೋವೈದ್ಯರೇ? ನೊಂದ ಹೃದಯಕ್ಕೆ ಸಾಂತ್ವನ ನೀಡುವವರೇ ನಿಜವಾದ ವೈದ್ಯರು. ವೈದ್ಯಕೀಯ ಚಿಕಿತ್ಸೆಯನ್ನು ನೀಡುವವರಲ್ಲಿ ಈ ಗುಣ ಇದ್ದರೆ ಅವರೇ ಅತ್ಯುತ್ತಮ ವೈದ್ಯರು. ಮಾನವನಿಗೆ ಈಗ ಈ "ಹೃದಯಚಿಕಿತ್ಸೆ"ಯನ್ನು ನೀಡುವುದಕ್ಕೆ ಸಮಯವೂ ಇಲ್ಲ, ಬಹುಶಃ ಅಂತಹ ಮನೋಭಾವವೂ ಕಡಿಮೆಯಾಗುತ್ತಿದೆ.

ಈಗ ಈ ಕೆಲಸವನ್ನು ಮಾಡುವುದಕ್ಕೆ ಬೇರೆಯವರನ್ನು ನಿಯಮಿಸಲಾಗುತ್ತಿದೆ. ಅವರಿಗೆ ಸಂಬಳ ಕೊಡಬೇಕಾಗಿಲ್ಲ—ಊಟ, ಬಟ್ಟೆ ಕೊಟ್ಟರೆ ಸಾಕು. ಅವರು ಮತ್ತಾರೂ ಅಲ್ಲ "ಡೊಂಕು ಬಾಲದ ನಾಯಕರು." ಅಮೆರಿಕದಲ್ಲಿ ಈಗ ಈ ಪ್ರಯೋಗ ನಡೆಯುತ್ತಿದೆ. ಅಲ್ಲಿಯ UCLA ವೈದ್ಯಕೀಯ ಕೇಂದ್ರದಲ್ಲಿ ೬೫ ವರ್ಷದ ಮಹಿಳೆ 'ಯೊಬ್ಬಳು ಬೈಪಾಸ್ ಸರ್ಜರಿಗೆ ಒಳಗಾಗಿದ್ದಳು. ಆಕೆ ಬದುಕುವ ಸ್ಥಿತಿಯಲ್ಲಿರಲಿಲ್ಲ. I.C.Uನಲ್ಲಿ ಆಕೆ ಇದ್ದಳು. ಕೊನೆಯ ಪ್ರಯತ್ನ ವಾಗಿ ಕೊಲ್ಲಿ ಎಂಬ ನಾಯಿಯನ್ನು ಅವಳ ಹತ್ತಿರ ಬಿಡಲಾಯಿತು. ಅದು ಅವಳ ಮೈಮೇಲೆ ಹತ್ತಿ ಅವಳನ್ನು ಮುದ್ದಿಸತೊಡಗಿತು.

ಸ್ವಲ್ಪ ಹೊತ್ತಿನಲ್ಲಿಯೇ ರೋಗಿಯ ಮೊಗದಲ್ಲಿ ಮುಗುಳ್ನಗೆ ಕಾಣಿಸಿತು. ಆಕೆಯ ರಕ್ತದ ಒತ್ತಡ ಕಡಿಮೆಯಾಗುತ್ತ ಬಂದು ಯಥಾಸ್ಥಿತಿಗೆ ಇಳಿಯಿತು. ಆ ವೈದ್ಯಕೀಯ ಕೇಂದ್ರದಲ್ಲಿ ಇಂತಹ ಶ್ವಾನ ವೈದ್ಯರು ಅನೇಕರಿದ್ದಾರಂತೆ. ಅವರಿಗೆ ತರಬೇತಿಯನ್ನು ನೀಡುವ "ಮೆಡಿಕಲ್ ಕಾಲೇಜು"ಗಳೂ ಇವೆಯಂತೆ. ಸಿಯಟ್ಲ್‌ನಲ್ಲಿರುವ ಡೆಲ್ಟ ಸೊಸೈಟಿ ಎಂಬ ತರಬೇತಿಯ ಕೇಂದ್ರದಲ್ಲಿ ತಯಾರಾದ ೪೫೦ ಶ್ವಾನವೈದ್ಯರು ೪೫ ರಾಜ್ಯಗಳಲ್ಲಿ ೩೫೦,೦೦೦ ರೋಗಿಗಳಿಗೆ ಚಿಕಿತ್ಸೆ ನೀಡಿವೆಯಂತೆ.

ಒಂದು ಕಡೆ ನಾಯಿಗಳ ಘನತೆ ಗೌರವ ಈ ರೀತಿ ಹೆಚ್ಚುತ್ತಿದ್ದರೆ, ಇನ್ನೊಂದು ಕಡೆ ಬೀದಿ ನಾಯಿಗಳನ್ನು ನೋಡಿದಾಗ "ನಾಯಿ ಪಾಡು ಬೇಡ" ಎಂಬ ಮಾತು ಇನ್ನೂ ಸತ್ಯವಾಗಿಯೇ ಇರುವಂತೆ ಕಂಡು ಬರುತ್ತದೆ. ಈ ಬೀದಿ ನಾಯಿಯ ಪಾಡು ಬಹುಶಃ ಭಾರತಕ್ಕೆ ಮಾತ್ರ ಸೀಮಿತವಾಗಿರಬಹುದು. ನಾಯಿಯ ಪಾಡೇಕೆ, ಇಲ್ಲಿ ಮನುಷ್ಯರ ಪಾಡೂ ಅಷ್ಟೇ. ಒಂದು ಕಡೆ ಕೊಳಚೆಪ್ರದೇಶದಲ್ಲಿರುವ ಜನರು, ಮತ್ತೊಂದು ಕಡೆ ಭವ್ಯ ಭವನ ದಲ್ಲಿವಾಸಿಸುವ ನಾಗರಿಕರೆನಿಸಿಕೊಂಡ ಶ್ರೀಮಂತ ವರ್ಗ. ಈ ಅಂತರ ದೂರವಾಗುವುದೆಂದು?

ಮನುಷ್ಯರಿಗೂ ನಾಯಿಗಳಿಗೂ ಒಂದು ಸಮಾನಗುಣವಿದೆ. ನಾಯಿಗಳು ಪರಸ್ಪರ ಕಚ್ಚಾಡಿಕೊಳ್ಳುವಂತೆ ಮನುಷ್ಯರೂ "ಶ್ವಾನವತ್ ಗುರ್ಗುರಾಯತೇ." ಆದರೆ ಅವುಗಳಲ್ಲಿರುವ ಸ್ವಾಮಿನಿಷ್ಠೆಯನ್ನೂ, ಪ್ರೀತಿಸುವ ಗುಣವನ್ನೂ ಮನುಷ್ಯ ಇನ್ನೂ ಕಲಿಯಬೇಕಾಗಿದೆ. ಇಲ್ಲದಿದ್ದರೆ ಅವನ್ನು ಕಲಿಯುವುದಕ್ಕೆ ಬಹುಶಃ ಅವನು ಮುಂದಿನ ಜನ್ಮದಲ್ಲಿ ನಾಯಿಯಾಗಿ ಹುಟ್ಟಬೇಕಾಗುತ್ತದೆ! ☆

## ಅಮೆರಿಕದಲ್ಲಿ ಹಿಂದೂಧರ್ಮ

ಅಮೆರಿದಲ್ಲಿ ಈಗ ೧.೪ ಮಿಲಿಯನ್ ಭಾರತೀಯರು ವಾಸಿಸುತ್ತಿದ್ದಾರಂತೆ. ಅನೇಕಾನೇಕ ಭಾರತೀಯ ಧರ್ಮಗುರುಗಳು ಅಲ್ಲಿಗೆ ಹೋಗಿ ಶಿಷ್ಯರನ್ನು ಮಾಡಿಕೊಳ್ಳುತ್ತಿದ್ದಾರೆ. ವೇದಾಂತ ಕೇಂದ್ರಗಳು, ಯೋಗಕೇಂದ್ರಗಳು ಇವೇ ಮುಂತಾದ ಅನೇಕ ಸಂಸ್ಥೆಗಳು ಹಿಂದೂ ಭಾವನೆಗಳ ಪ್ರಚಾರದಲ್ಲಿ ನಿರಂತರ ಕಾರ್ಯೋನ್ಮುಖವಾಗಿವೆ. ಅನೇಕ ಹಿಂದೂ ದೇವಸ್ಥಾನಗಳು ಅಲ್ಲಿ ತಲೆ ಎತ್ತುತ್ತಿವೆ. ಈ ಎಲ್ಲ ಅಂಶಗಳಿಂದ ಹಿಂದೂಧರ್ಮ ಅಲ್ಲಿ ಜನಪ್ರಿಯವಾಗಿರುವಂತೆ ಕಂಡುಬರುತ್ತದೆ.

ಆದರೆ ನಿಜಸ್ಥಿತಿಯೇ ಬೇರೆ. ಅಲ್ಲಿ ಇತ್ತೀಚೆಗೆ ನಡೆದ ಒಂದು ಸಮೀಕ್ಷೆಯ ಪ್ರಕಾರ ಶೇಕಡ ೯೫ ಅಮೆರಿಕನರಿಗೆ ಹಿಂದೂಧರ್ಮದ ಬಗ್ಗೆ ತಿಳಿದಿರುವುದು ಅತ್ಯಲ್ಪ ಅಥವಾ ಏನೂ ತಿಳಿಯದು. ಸಾಮಾನ್ಯ ಅಮೆರಿಕನರ ಮನಸ್ಸಿನಲ್ಲಿ ಹಿಂದೂಧರ್ಮವೆಂದರೆ "ದನದ ಪೂಜೆ" ಅಥವಾ "ವಿವಿಧ ದೇವತೆಗಳು ಮತ್ತು ದೇವಸ್ಥಾನಗಳು" ಅಷ್ಟೆ.

ಭಾರತದಲ್ಲಿಯೂ ಇದೇ ಪರಿಸ್ಥಿತಿ. ಉದಾತ್ತ ವೇದಾಂತ ಭಾವನೆಗಳು ಭಾರತದಲ್ಲಾದರೂ ಎಷ್ಟು ಜನರಿಗೆ ತಿಳಿದಿದೆ ಅಥವಾ ತಿಳಿಯುವ ಇಚ್ಛೆ ಇದೆ? ಅನೇಕರಿಗೆ ಧರ್ಮವೆಂದರೆ—ಅಮೆರಿಕದಲ್ಲಾಗಲಿ, ಭಾರತದಲ್ಲಾಗಲಿ—ಕೆಲವು ಲೋಕಾಚಾರ ಕಂದಾಚಾರಗಳು, ಕೆಲವು ಮೂಢನಂಬಿಕೆಗಳು ಮತ್ತು ದೇವಸ್ಥಾನ ಚರ್ಚು ಮಸೀದಿಗಳು.

ಇದು ತಾಂತ್ರಿಕ ಯುಗ. ಇಲ್ಲಿ ಕ್ರಿಯೆಗೇ ಪ್ರಾಧಾನ್ಯ. ಆದ್ದರಿಂದ ಜನರು ಕ್ರಿಯಾಪ್ರಧಾನ ಧರ್ಮವನ್ನು ಅರ್ಥಮಾಡಿಕೊಳ್ಳುತ್ತಾರೆಯೆ ಹೊರತು ತತ್ತ್ವಪ್ರಧಾನವಾದುದನ್ನಲ್ಲ. ಹೋಮ ಹವನ ಪೂಜಾದಿ ಕ್ರಿಯೆಗಳನ್ನು ಜನ ಇಷ್ಟಪಡುತ್ತಾರೆ. ಏನಾದರೂ ಮಾಡುವುದಕ್ಕೆ ಇರಬೇಕು—ವಿಶೇಷವಾಗಿ ಭೌತಿಕವಾಗಿ. ಅದ್ವೈತ ಪ್ರತಿಪಾದಕರಾದ ಶಂಕರಾಚಾರ್ಯರೂ ಕೂಡ ವಿವಿಧ ದೇವತೆಗಳ ಪೂಜೆಯನ್ನು ವಿಧಿಸಿದರು. ಜ್ಞಾನ ಮತ್ತು ಕರ್ಮಗಳ ಈ ತಾಕಲಾಟ ಬಹು ಪುರಾತನ ಕಾಲದಿಂದಲೂ ಬಂದಿದೆ. ಹಿಂದೆ ಉತ್ತರಮೀಮಾಂಸ(ಜ್ಞಾನ) ಮತ್ತು ಪೂರ್ವ ಮೀಮಾಂಸ (ಕರ್ಮ)ಗಳ ರೂಪದಲ್ಲಿ ಈ ಸಂಘರ್ಷ ನಡೆಯುತ್ತಿತ್ತು. ಅದೇ ಈಗ ಹೊಸರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ.

ಕ್ರಿಯಾಪ್ರಧಾನ ಧರ್ಮದೊಡನೆ ತತ್ತ್ವ ಅಥವಾ ಜ್ಞಾನಪ್ರಧಾನ ಧರ್ಮವನ್ನೂ ನಾವು ಸೇರಿಸಬೇಕಾಗುತ್ತದೆ. ಇಲ್ಲದಿದ್ದರೆ ಧರ್ಮ ಒಂದು ಗೊಡ್ಡು ಆಚರಣೆಗಳ, ಮೂಢನಂಬಿಕೆಗಳ ಕಂತೆಯಾಗುತ್ತದೆ. ಜನರಿಗೆ ಕ್ರಿಯೆ ಬೇಕು. ಕೇವಲ ತತ್ತ್ವವನ್ನು ಹಿಡಿದುಕೊಂಡು ಬಹಳ ಕಾಲ ನಿಲ್ಲಲಾರರು. ತಾತ್ತ್ವಿಕ ಧರ್ಮ ಮತ್ತು ತಾಂತ್ರಿಕ ಧರ್ಮ ಇವೆರಡನ್ನೂ ಸಮನ್ವಯಗೊಳಿಸಬೇಕು. ಇವೆರಡೂ ಸಮಾನಾಂತರವಾಗಿ ಮುಂದುವರೆಯಬೇಕು.

☆